# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ. 112/2021

**ಪಿಡಬ್ಲೂ-1**

**ಸಿಡಬ್ಲೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಸತೀಶ್ |
| ತಂದೆಯ ಹೆಸರು | - | ದೊಡ್ಡೇಗೌಡ |
| ವಯಸ್ಸು | - | 32 ವರ್ಷ |
| ಕೆಲಸ | - | ಪೋಲಿಸ್ ಪೇದೆ, ಬೆಂಗಳೂರು |
| ವಾಸ | - | ಬೆಂಗಳೂರು |

**ದಿನಾಂಕ 19-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ದಿಃ 23.03.2019 ಮತ್ತು 24.03.2019 ರಂದು ನನ್ನ ಮದುವೆಯಿತ್ತು. ಕೆ.ಆರ್.ನಗರ ಚೀರನಹಳ್ಳಿ ರಸ್ತೆಯಲ್ಲಿರುವ ಶ್ರೀ ಸಾಯಿ ಕನ್ವೆನ್ಸನ್ ಹಾಲ್ ನಲ್ಲಿ ಮದುವೆಯಿತ್ತು. ದಿಃ 23.03.2019 ರಂದು ರಾತ್ರಿ 09.30 ಗಂಟೆ ಸಮಯದಲ್ಲಿ ಸಾಯಿ ಕನ್ವೇಷನ್ ಹಾಲ್ ಚೌಟರಿ ಮುಂಭಾಗದಲ್ಲಿ ನನ್ನ ಬೈಕ್ ಸಂಖ್ಯೆ ಕೆಎ 11-ಇಎಲ್-3492 ಬೈಕ್ ನ್ನು ನಿಲ್ಲಿಸಿದ್ದೇವು. ಆ ದಿನ ನನ್ನ ರಿಸಪ್ಸನ್ ಮುಗಿದ ನಂತರ ನನ್ನ ಬೈಕ್ ನ್ನು ನೋಡಿದಾಗ ಅಲ್ಲಿ ಇರಲಿಲ್ಲ. ಯಾರೋ ಅದನ್ನು ಕಳವು ಮಾಡಿದ್ದರು. ನಂತರ ಬೈಕ್ ನ್ನು ನಾನು ಮದುವೆ ಮುಗಿದ ಮೇಲೆ ಹುಡುಕಾಡಿರುತ್ತೇನೆ. ಆಗ ನನ್ನ ಬೈಕ್ ಸಿಕ್ಕಿರುವುದಿಲ್ಲ. ಮದುವೆ ಕಾರ್ಯಗಳನ್ನು ಮುಗಿಸಿಕೊಂಡು ದಿಃ 28.03.2019 ರಂದು ನಮ್ಮ ಬೈಕ್ ಕಳುವಾದ ಬಗ್ಗೆ ದೂರು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಅದೇ ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದು ಪೋಲಿಸರು ಸ್ಥಳ ಮಹಜರ್ ಬರೆದಿರುತ್ತಾರೆ. ಸಾಕ್ಷಿಯು ಸ್ಥಳ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಮಹಜರ್ ಮದ್ಯಾಹ್ನ 2 ರಿಂದ 3 ಗಂಟೆಯವರೆಗೆ ಜರುಗಿಸಿರುತ್ತಾರೆ. ಆನಂತರ ಮೆಟಗಳ್ಳಿ ಪೋಲಿಸರು ನನಗೆ ಕರೆ ಮಾಡಿ ಸುಮಾರು 22 ರಿಂದ 30 ದ್ವಿಚಕ್ರ ವಾಹನಗಳು ಸಿಕ್ಕಿರುತ್ತವೆ ನೀವು ಬಂದು ನಿಮ್ಮ ವಾಹನ ಗುರುತಿಸಿ ಎಂದು ಹೇಳಿರುತ್ತಾರೆ. ನಂತರ ನಾನು ಠಾಣೆಗೆ ಹೋಗಿ ನನ್ನ ವಾಹನವನ್ನು ಗುರುತಿಸಿರುತ್ತೇನೆ. ನನ್ನ ದ್ವಿಚಕ್ರ ವಾಹನಕ್ಕೆ ಇದ್ದ ಮೂಲ ನಂಬರ್ ನ್ನು ಬದಲಾಯಿಸಿಕೊಂಡಿದ್ದರು.

ನಂತರ ನಾನು ಮೈಸೂರಿನ ನ್ಯಾಯಾಲಯದ ಮೂಲಕ ನನ್ನ ವಾಹನವನ್ನು ಬಿಡಿಸಿಕೊಂಡಿರುತ್ತೇನೆ. ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಪೋಟೋಗಳಲ್ಲಿ ಇರುವ ದ್ವಿಚಕ್ರ ವಾಹನವನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ದ್ವಿ ಚಕ್ರ ವಾಹನಗಳನ್ನು ಕೀರ್ತಿರಾಜ್ ಎಂಬುವವರು ಕಳ್ಳತನ ಮಾಡಿದ್ದರು ಎಂದು ಗೊತ್ತಾಯಿತು. ಸದರಿ ವ್ಯಕ್ತಿಯಿಂದಲೇ ಕಳುವಾದ ನನ್ನ ದ್ವಿಚಕ್ರವಾಹನವನ್ನು ವಶಪಡಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ. 112/2021

ಸಿಡಬ್ಲ್ಯೂ-1

ಸಾಕ್ಷಿದಾರರ ಹೆಸರು - ವಸಂತಕುಮಾರ್.ಎನ್
ತಂದೆಯ ಹೆಸರು - ನಂಜಪ್ಪ
ವಯಸ್ಸು - 51 ವರ್ಷ
ಕೆಲಸ - ಎ.ಎಸ್.ಐ, ನಂಜನಗೂಡು
ವಾಸ - ನಂಜನಗೂಡು

**ದಿನಾಂಕ 17-10-2023 ರಂದು ಸಾಕ್ಷಿಯನ್ನು ಕರಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಯನ್ನು ಸಾಕ್ಷಿ ಮಾನ್ಯ ಎಪಿಪಿಯವರಿಂದ**

2020 ಅಕ್ಟೋಬರ್ ರಿಂದ ಸೆಪ್ಟೆಂಬರ್ 2023 ವರೆಗೆ ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 05.09.2023 ರಂದು ನಾನು ಈ ಪ್ರಕರಣದ ಆರೋಪಿಯಾದ ಕೀರ್ತಿ ಕುಮಾರ್ ಬಿನ್ ಲೇಟ್ ಸುಂದರ್ ಮೂರ್ತಿ, ಉತ್ತೇನಹಳ್ಳಿ ಗ್ರಾಮ, ಪಂಚವಳ್ಳಿ ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು ರವರ ವಿರುದ್ದ ಮಾನ್ಯ ನ್ಯಾಯಾಲಯದ ಉದ್ಘೋಷಣಾ ಆದೇಶದ ಮೇರೆಗೆ ಹೋಗಿ ಸದರಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬಳಿ ಸಾರ್ವಜನಿಕರಲ್ಲಿ ನಾನು ವಿಚಾರಿಸಿದಾಗ ಪಂಚರರಾದ ರಾಮೇಗೌಡ ಮತ್ತು ನಾಗೇಂದ್ರ ರವರ ಸಮಕ್ಷಮ ಆರೋಪಿಯ ಬಗ್ಗೆ ವಿಚಾರಣೆ ಮಾಡಿದಾಗ ಸದರಿ ಆರೋಪಿಯು ಈ ವಿಳಾಸದಲ್ಲಿ ವಾಸವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ನಾನು ಪಂಚರ ಸಮಕ್ಷಮ ಸದರಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಆರೋಪಿಯ ಸಂಬಂದ ಗ್ರಾಮದ ಪೌರ ಕಾರ್ಮಿಕರಿಂದ ಸದರಿ ಗ್ರಾಮದಲ್ಲಿ ಟಾಮ್ ಟಾಮ್ ಹೊಡಿಸಲಾಯಿತು. ಸದರಿ ಉದ್ಘೋಷಣಾ ಆದೇಶದ ಪ್ರತಿಯನ್ನು ಸರ್ಕಾರಿ ಶಾಲೆಯ ಆವರಣದ ಕಾಂಪೌಂಡ್ ಗೆ ಅಂಟಿಸಿ ಸದರಿ ಸ್ಥಳದಲ್ಲಿ ಮಹಜರ್ ನ್ನು ಬೆಳಿಗ್ಗೆ 10.30 ರಿಂದ 11.20 ರವರೆಗೆ ಮಾಡಿರುತ್ತೇನೆ. ಸಾಕ್ಷಿ ಸದರಿ ಮಹಜರ್ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರ್ ನ್ನು ನಿಪಿ 5 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 5 ಎ ಎಂದು ಗುರುತಿಸಲಾಯಿತು. ದಿಃ 06.09.2023 ರಂದು ಮತ್ತೊಂದು ಪ್ರತಿಯನ್ನು ಕೆ ಆರ್ ನಗರ ನ್ಯಾಯಾಲಯದ ಸೂಚನಾ ಫಲಕದ ಮೇಲೆ ಅಂಟಿಸಿರುತ್ತೇನೆ.

**ಮರು ವಿಚಾರಣೆ** - ಇರುವುದಿಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಪವಿತ್ರ.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ